**ಸಾಕ್ಷಿಯನ್ನು ದಿಃ26.02.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ -1,5 ಮತ್ತು 9 ನೇ ಪ್ರತಿವಾದಿ ಪರ ಶ್ರೀ ಎಸ್.ಎಂ ವಕೀಲರಿಂದಃ**

ನನ್ನ ತಂದೆ ವೆಂಕಟಸ್ವಾಮಿಗೆ ಇಬ್ಬರು ಪತ್ನಿಯರು ಎಂದರೆ ಸರಿ. ಮೊದಲನೇ ಪತ್ನಿ ಚಾರ್ಕರ್ಲಮ್ಮ ಎಂದರೆ ಸರಿ. ಸದರಿ ಚಾಜರ್ಲಮ್ಮನಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರುಗಳೆಂದರೆ 5 ನೇ ಪ್ರತಿವಾದಿ ಈರಪ್ಪ, 6 ನೇ ಪ್ರತಿವಾದಿ ಗೌರಮ್ಮ ಹಾಗೂ ಲಕ್ಷ್ಮಪ್ಪ ಮತ್ತು ವೆಂಕಟಪ್ಪ ಎಂದರೆ ಸರಿ.

ಮೊದಲನೇ ಹೆಂಡತಿ ಚಾಕಾರ್ಲಮ್ಮನಿಗೆ ಲಕ್ಷ್ಮಮ್ಮ ಎಂಬ ಯಾವುದೇ ಹೆಣ್ಣು ಮಗಳು ಇರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ-2 ರಲ್ಲಿ 7 ನೇ ಪ್ರತಿವಾದಿ ಲಕ್ಷ್ಮಮ್ಮ ಎಂಬುವವರನ್ನು ತೋರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ವೆಂಕಟಪ್ಪ ಈ ದಾವೆ ಹೂಡುವ ಕಾಲಕ್ಕೆ ಜೀವಂತವಿರಲಿಲ್ಲ. ಸದರಿ 8 ನೇ ಪ್ರತಿವಾದಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ.

ನನ್ನ ತಂದೆ ವೆಂಕಟಸ್ವಾಮಿಯವರ 2 ನೇ ಹೆಂಡತಿ ಮುನಿವೆಂಕಟಮ್ಮ ಉರುಪ್ ವೆಂಕಟಮ್ಮ. ನಾನು ವಿವಾಹವಾದ ನಂತರ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದು ನಾನು ಒಟ್ಟು ಕುಟುಂಬದ ಸದಸ್ಯಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಮನೆಯಲ್ಲಿ ವಾಸವಿರುವುದಿಲ್ಲ ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸಾಕ್ಷಿಯು ನಾನು ಎರಡೂ ಕಡೆ ವಾಸವಾಗಿರುತ್ತೇನೆ ಎಂದು ನುಡಿದಿರುತ್ತಾರೆ.

2008 ನೇ ಸಾಲಿನಲ್ಲಿ ನನ್ನ ತಂದೆ ಅವರ ಇಬ್ಬರೂ ಹೆಂಡತಿಯರ ಗಂಡು ಮಕ್ಕಳಿಗೆ ಆಸ್ತಿಯನ್ನು ಸಮಭಾಗ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ಕಾಮಸಮುದ್ರಂ ಪೊಲೀಸ್ ಠಾಣೆಯಲ್ಲಿ ನನಗೆ ನನ್ನ ಭಾಗಕ್ಕೆ ಬರಬೇಕಾದ ಪಾಲಿಗೆ ಸಂಬಂಧಿಸಿದಂತೆ ಒಂದು ಲಕ್ಷ ಐವತ್ತು ಸಾವಿರ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನಗೆ ದಾವಾ ಆಸ್ತಿ ಮೇಲೆ ಹಕ್ಕು

ಇರುವುದಿಲ್ಲವೆಂದು ನಾನು ಮತ್ತು 3 ನೇ ವಾದಿ ಹಕ್ಕು ಬಿಡುಗಡೆ ಪತ್ರ ಜಾರಿಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಗಳಲ್ಲಿ ಒಟ್ಟು ಕುಟುಂಬದ ಸದಸ್ಯಳಾಗಿ ಜಂಟಿ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ನನ್ನ ಸಹೋದರರ ಹೆಸರಿಗೆ ಖಾತೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3, 5 ನೇ ಪ್ರತಿವಾದಿ ಹೆಂಡತಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಐಟಂ ನಂ.3 ಕ್ಕೆ ಸಂಬಂಧಿಸಿದಂತೆ ಈಗಲೂ ಪಹಣಿ ಪತ್ರಿಕೆ ಅವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ.

ಸದರಿ ದಾವೆಯಲ್ಲಿ ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ನನ್ನ ಅಣ್ಣ ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ವಿಭಾಗವಾಗಿರುವ ವಿಚಾರ ತಿಳಿದಿದ್ದರೂ ಸಹ ನನ್ನ ಅಣ್ಣ 2 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ಈ ದಾವೆಯನ್ನೂಡಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ನನ್ನ ಸಹೋದರರೇ ಅವರ ಪಾಲಿಗೆ ಬಂದ ಸ್ವತ್ತುಗಳಲ್ಲಿ ಸ್ವಾಧೀನ ಹೊಂದಿರುತ್ತಾರೆ ನಾನು ಯಾವ ಕಾಲಕ್ಕೂ ದಾವಾ ಆಸ್ತಿಗಳಲ್ಲಿ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿಯ ಹೆಂಡತಿಗೆ ತೊಂದರೆ ಮಾಡುವ ಉದ್ದೇಶದಿಂದ ಅವರ ಸ್ವಯಾರ್ಜಿತ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ದಾವೆಯನ್ನೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಬಿ.ಸಿ. ದೀಪು)**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**